# ಮನವ ನಿಲಿಸುವದು ಬಹು ಕಷ್ಟ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** This is from the book: Purandara Sahitya Darshana, Samputa 2, Jeevana Darshana edited by Prof. S.K. Ramachandra Rao
3. **Note:** Lyrics in both the above references are almost same. Minor differences in Ref. 2 are neglected here.
4. **Note:** Singer has followed these lyrics.

ರಾಗ: ನಾದ ನಾಮ ಕ್ರಿಯ ಆದಿ ತಾಳ

ಮನವ ನಿಲಿಸುವದು ಬಹು ಕಷ್ಟ ಹರಿದಾಡುವಂಥ
ಮನವ ನಿಲಿಸುವದು ಬಹು ಕಷ್ಟ || ಪ ||

ಕಾಶಿಗ್ಹೋಗಲು ಬಹುದು
ದೇಶ ತಿರುಗಲು ಬಹುದು
ಆಸೆ ಸುಟ್ಟಂತೆ ಇರಬಹುದು || ೧ ||

ಜಪವ ಮಾಡಲು ಬಹುದು
ತಪವ ಮಾಡಲು ಬಹುದು
ಉಪವಾಸ ವ್ರತದಲ್ಲಿರಬಹುದು || ೨ ||

ಸ್ನಾನ ಮಾಡಲು ಬಹುದು
ಮೌನ ಮಾಡಲು ಬಹುದು
ಧ್ಯಾನದಿ ಪುರಂದರ ವಿಠಲನ ಚರಣದಲಿ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಮನಸ್ಸು ದುರ್ನಿಗ್ರಹವಾದುದೆಂದೂ, ಚಂಚಲವೆಂದೂ, ಪ್ರಮಾಥಿಯೆಂದೂ ಭಗವದ್ಗೀತೆಯಲ್ಲಿ ವಿವರಣೆಯಿದೆ. ಇಂದ್ರಿಯ ವ್ಯಾಪಾರದಿಂದ ಪುಷ್ಟವಾದ ಮನಸ್ಸು, ವಿಷಯಭೋಗಗಳಿಂದ ಬೆಳೆದು ಅದರಲ್ಲೇ ಬೇರೂರಿದ ಮನಸ್ಸನ್ನು ವಶಮಾಡಿಕೊಳ್ಳುವುದು ಕಷ್ಟವೆಂದು ವ್ಯಾಸರಾಯಸ್ವಾಮಿಗಳ ಕೀರ್ತನೆಗಳಲ್ಲೂ ಬರುತ್ತದೆ. ಭ್ರಾಂತಿಯಿಂದ ಮನಸ್ಸನ್ನು ತಿರುಗಿಸಬೇಕಾದರೆ ಹರಿಯ ಕಾರುಣ್ಯವೇ ಬೇಕೆಂದು ಅವರು

‘ಎನ್ನ ಮನ ಕಂಡ ಕಡಡೆಗೆ ಎರಗುತಿದೆ
ನಿನ್ನಲಿ ನಿಲಿಸೋ ಕಾಯೋ’
ಎಂದು ಬೇಡಿಕೊಂಡರು. ಒಮ್ಮೊಮ್ಮೆ ಬೇಸತ್ತು
‘ಛೀ ಛೀ ಮನವೆ ನಾಚದ ತನುವೆ
ನೀಚವೃತ್ತಿಯ ಬಿಟ್ಟು ನನೆನ ಕಂಡ್ಯ ಹರಿಯ’
ಎಂದು ಬೋಧಿಸಿದರು.

**Classification:** Keerthane
**Ankita:** purandara vittala
**Location:** NA
**Category:** Jeevana Anubhava, Jeevanoddhara, Bhakti
**Sub-Category:** mana, kasha, rajya, japa, tapa, vrata, upavasa, snana, dhyAna,
**Pravachana:** NA
**Explanation:** NA